## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ ನಂಃ 1103/2022

ಸಿಡಬ್ಲ್ಯೂಃ 1  ಪಿಡಬ್ಲ್ಯೂಃ 1

| | |
|---|---|
| ಹೆಸರುಃ | ನೀಲೇಶ್ವರ ವಾಸುದೇವ ನಾಯ್ಕ |
| ತಂದೆ/ಗಂಡನ ಹೆಸರುಃ | ವಾಸುದೇವ ನಾಯ್ಕ |
| ವಯಸ್ಸುಃ | 42 ವರ್ಷ |
| ಉದ್ಯೋಗಃ | ಕೂಲಿ ಕೆಲಸ |
| ವಾಸಃ | ಜರಡಿ , ಕಾರವಾರ |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 25-07-2025 ರಂದು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

1 ನೇ ಆರೋಪಿ ನನ್ನ ಹೆಂಡತಿ. 2 ನೇ ಆರೋಪಿ ನನ್ನ ಹೆಂಡತಿಯ ತಂಗಿ ಇರುತ್ತಾರೆ.

ದಿನಾಂಕಃ 04.03.2010 ರಂದು ನನ್ನ ಮತ್ತು 1 ನೇ ಆರೋಪಿತಳ ನಡುವೆ ಉಜ್ವಲಲಕ್ಷ್ಮೀ ಹಾಲ್ ನಲ್ಲಿ ವಿವಾಹ ಆಗಿರುತ್ತದೆ. ಮದುವೆಯ ಕಾಲಕ್ಕೆ ನಾನು ನನ್ನ ಹೆಂಡತಿಗೆ ಬಂಗಾರದ ಮಾಂಗಲ್ಯ ಸರ , 4 ಬಂಗಾರದ ಬಳೆ, ಮೂರು ಬಂಗಾರದ ಉಂಗುರ , ಮೂರು ಬಂಗಾರದ ಕಿವಿಯೋಲೆ , ಬಂಗಾರದ ಚೈನು , ಬಂಗಾರದ ನಕ್ಲೇಸ ಇತ್ಯಾದಿ ಆಭರಣಗಳನ್ನು ಒಟ್ಟು 18 ತೊಲೆ ಬಂಗಾರವನ್ನು ನೀಡಿರುತ್ತೇನೆ. ಮದುವೆಯಾದ 2 ತಿಂಗಳ ಕಾಲ ನಾನು ಊರಿನಲ್ಲಿದ್ದು , ನಂತರ ದುಡಿಯಲು ಮಸ್ಕತ್ ಗೆ ತೆರಳಿರುತ್ತೇನೆ. ಹಾಗೆ ಮಸ್ಕತ್ ಗೆ ತೆರಳಿದ ನಂತರ 3 - 4 ತಿಂಗಳಿಗೆ ಒಮ್ಮೆ ನಾನು ಊರಿಗೆ ಬರುತ್ತಿದ್ದೆನು. 2018 ರ ವರೆಗೆ ನಾನು ನನ್ನ ಹೆಂಡತಿಯಲ್ಲಿ ಮದುವೆಯ ಕಾಲಕ್ಕೆ ನೀಡಿದ ಬಂಗಾರವನ್ನು ನಾನು ನೋಡಿದ್ದು , 2018 ನೇ ಸಾಲಿನಲ್ಲಿ ಆಕೆಯು ಬಂಗಾರವನ್ನು ಮುತ್ತುಟ ಫೈನಾನ್ಸನಲ್ಲಿ ಆಕೆಯ ತಂಗಿ 2 ನೇ ಆರೋಪಿತಳ ಹೆಸರಿನಲ್ಲಿ ಇಟ್ಟಿರುತ್ತಾಳೆ. ಈ ಬಗ್ಗೆ ನಾನು ಪೋಲೀಸ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಆಗ ಪೋಲಿಸರು ಆಕೆಯನ್ನು ಪೋಲೀಸ ಠಾಣೆಗೆ ಕರೆದಿದ್ದು , ಆಕೆ ಬಂದಿರುವುದಿಲ್ಲಾ. ನಂತರ ನಾನು ಮಹಿಳಾ ಸಾಂತ್ವಾನ ಕೇಂದ್ರಕ್ಕೆ ತೆರಳಿ ಅರ್ಜಿಯನ್ನು ನೀಡಿದ್ದು , ಅಲ್ಲಿಗೂ ಸಹ 1 ನೇ ಆರೋಪಿತಳು ಬಂದಿರುವುದಿಲ್ಲಾ. ನಂತರ ನಾನು ನ್ಯಾಯಾಲಯಕ್ಕೆ ಬಂದು ಖಾಸಗಿ ದೂರನ್ನು ದಿನಾಂಕಃ 10.11.2021 ರಂದು ನೀಡಿರುತ್ತೇನೆ. 1 ಮತ್ತು 2 ನೇ ಆರೋಪಿತರು ನನಗೆ ಮೋಸ ಮಾಡಿದ ಬಗ್ಗೆ ನಾನು ದೂರನ್ನು ನೀಡಿರುತ್ತೇನೆ. ದೂರನ್ನು ನೀಡಿದ ನಂತರ ನಮ್ಮ ಮನೆಯ ಹತ್ತಿರ ಪೋಲೀಸರು ದಿನಾಂಕಃ

17.03.2022 ರಲ್ಲಿ ಬಂದಿರುತ್ತಾರೆ. ಆ ಸಮಯದಲ್ಲಿ ನಾನು ಅವರಿಗೆ ಮನೆಯಲ್ಲಿ ಬಂಗಾರ ಇಟ್ಟಿದ್ದ ಲಾಕರ್ ತೋರಿಸಿರುತ್ತೇನೆ. ಪೋಲೀಸರುನಾನು ತೋರಿಸಿದ ಸ್ಥಳವನ್ನು ಇಬ್ಬರು ಪಂಚ ಸಾಕ್ಷಿದಾರರ ಸಮಕ್ಷಮ ಪಂಚನಾಮೆಯನ್ನು ಮತ್ತು ಕಚ್ಚಾ ನಕಾಶೆಯನ್ನು ತಯಾರಿಸಿ ಭಾವಚಿತ್ರವನ್ನು ತೆಗೆದಿರುತ್ತಾರೆ. ನಂತರ ನಾನು ಪೋಲೀಸರಲ್ಲಿ ಹಾಜರಾಗಿ ಬಂಗಾರವನ್ನು ಖರೀದಿಸಿದ ಬಗ್ಗೆ ರಸೀದಿಯುನ್ನು ಹಾಜರು ಪಡಿಸಿ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ಫಿರ್ಯಾದನ್ನು ತೋರಿಸಿದ್ದು , ಸಾಕ್ಷಿಯು ಸದರಿ ಫಿರ್ಯಾದು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು 1(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಮತ್ತು ಕಚ್ಚಾ ನಕಾಶೆ ಹಾಗೂ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ.2, 3 ಮತ್ತು 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.4 ಮತ್ತು 5 ಎಂದು ಗುರುತಿಸಲಾಯಿತು. ಸಾಕ್ಷಿಯು ನಾಲ್ಕು ರಸೀದಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಆರೋಪಿ ಪರ ತಕರಾರಿಗೆ ಒಳಪಟ್ಟು ಕ್ರಮವಾಗಿ ನಿಪಿ.6 ರಿಂದ 9 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಮತ್ತು 1 ನೇ ಆರೋಪಿತಳ ನಡುವಿನ ವಿವಾಹ ಆಮಂತ್ರಣ ಪತ್ರಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ಎಫ್** ಎನ್ **ವಕೀಲರು ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಪ್ರ.ದ.ನ್ಯಾದಂ. ಕಾರವಾರ**